**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು.**

**ಸಿ.ಸಿ.ಸಂಖ್ಯೆ 3236/2023**

ಫಿರ್ಯಾದುದಾರರು:- ಸರ್ಕಾರದ ಪರವಾಗಿ ಕಡೂರು ಪೋಲೀಸರು

ವಿರುದ್ಧ

ಆರೋಪಿ/ತರು:- ಸಿ.ಆರ್.ಉದೇಶ್ ಕುಮಾರ್

**ದೋಷಾರೋಪಣೆ**

ಶ್ರೀಮತಿ ಸವಿತರಾಣಿ ಹೆಚ್.ವಿ., ಬಿ.ಎ.ಎಲ್. ಎಲ್.ಎಲ್.ಬಿ, 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವ:

ಸಿ.ಆರ್.ಉದೇಶ್ ಕುಮಾರ್ ಬಿನ್ ರಮೇಶಪ್ಪ, ಸುಮಾರು 34 ವರ್ಷ, ವ್ಯವಸಾಯ ವಾಸ : ಚಿಕ್ಕಬಳ್ಳೇಕೆರೆ ಗ್ರಾಮ, ಕಡೂರು ತಾಲ್ಲೂಕು.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಏನೆಂದರೆ:

ದಿನಾಂಕ 29.03.2023 ರಂದು ಕರ್ನಾಟಕ ವಿಧಾನಸಭಾ ಚುನಾವಣೆ -2023 ರ ಚುನಾವಣಾ ನೀತಿ ಸಂಹಿಸೆ ಜಾರಿ ಹಿನ್ನೆಲೆಯಲ್ಲಿ ಅಬಕಾರಿ ಅಕ್ರಮಗಳನ್ನು ತಡೆಗಟ್ಟುವಿಕೆ ಮತ್ತು ನಿಯಂತ್ರಣಕ್ಕೆ ಸಂಬಂಧಿಸಿದಂತೆ ಪಿರ್ಯಾದುದಾರರು ಹಾಗೂ ಕಡೂರು ವಲಯದ ಅಬಕಾರಿ ಉಪನಿರೀಕ್ಷಕರಾದ ಚಾಸಾ-1 ಶಿವರುದ್ರಯ್ಯ ಸಿ. ಹಾಗೂ ಸಿಬ್ಬಂದಿಗಳು ಇಲಾಖಾ ವಾಹನದಲ್ಲಿ ಕಡೂರು ಪಟ್ಟಣದಿಂದ ಮಲ್ಲೇಶ್ವರ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಬರುವ ಸೇತುವೆ ಹತ್ತಿರ ರಸ್ತೆಗಾವಲು ಮಾಡುತ್ತಿರುವಾಗ, ಆರೋಪಿಯಾದ ನೀವು ದ್ವಿಚಕ್ರ ವಾಹನ ಸಂಖ್ಯೆ: ಕೆಎ 18 ಕೆ 2597 ರ ಟಿ.ವಿ.ಎಸ್. ಎಕ್ಸ್.ಎಲ್. ವಾಹನದಲ್ಲಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಲೇಬಲ್ ಹರಿದು ಹೋಗಿರುವ 90 ಎಂ.ಎಲ್.ನ 80 ರಾಜಾ ವಿಸ್ಕಿ ಮದ್ಯದ ಪೌಚುಗಳನ್ನು ಯಾವುದೇ ಪರವಾನಗಿಯನ್ನು ಹೊಂದದೇ ದಾಸ್ತಾನು ಹೊಂದಿದ್ದಿರಿ. ಆದ್ದರಿಂದ ನೀವು **ಕರ್ನಾಟಕ ಅಬಕಾರಿ ಕಾಯ್ದೆಯ ಕಲಂ 11, 14(2), 38 (ಎ)** ರ ರೀತ್ಯಾ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಉ: ಹೌದು

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉ: ಇಲ್ಲ, ವಿಚಾರಣೆಯಾಗಬೇಕು.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ: **21** ನೇ ದಿವಸ ಡಿಸಂಬರ್ ಮಾಹೆ 2023 ನೇ ಇಸವಿ.

21/12/23

(ಸವಿತರಾಣಿ ಹೆಚ್.ವಿ.),
2 ನೇ ಹೆಚ್ಚುವರಿ ಸಿವಿಲ್ ಮತ್ತು ಪ್ರದನ್ಯಾದಂ ಕಡೂರು.